RegdNo B G155

Sn

(152) 2

17—8—1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು — ಆರಮನೆ ಸಿಂಸ್ಥೇದಾರ್ ಎಂ ವಿ ಸುಬ್ಬರಾಯರು ಸಂಪಾದಕರು — ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್ 2 ಪೈಸೆ

ಪಾರ್ಲಿಮೆಂಟಿನಲ್ಲಿ

ಸರ್ಕಾರದ ಮೇಲೆ

ಅವಿಶ್ವಾಸ ಸೂಚನೆ

ನವದೆಹಲಿ— ಕಚ್ ಒಪ್ಪಂದದ ಬಗ್ಗೆ ಸರಕಾರವು ಪಾರ್ಲಿಮೆಂಟಿನೊಡನೆ ಆಲೋಚಿಸದಿದ್ದಕ್ಕಾಗಿ, ಭಾರತ ಸರ್ಕಾರದ ಮೇಲೆ ಸ್ವತಂತ್ರ ಪಕ್ಷದ ಶ್ರೀ ಮಸಾನಿ ಮತ್ತು ದಾಂಡೇಕರ್, ಲೋಕಸಭೆಯಲ್ಲಿ ತಂದ ಅವಿಶ್ವಾಸ ಸೂಚನೆ ಅಡ್ಮಿಟ್ ಆಯಿತು; ಈ ಬಗ್ಗೆ ಚರ್ಚೆ ಮುಂದಿನ ವಾರ ನಡೆಯಲಿದೆ

★

ಬ್ರಿಟನ್ನಿನಲ್ಲಿ

ವಾಲ್ವರ್‌ಹ್ಯಾಂಪ್ಟನ್ನಿನಲ್ಲಿ ವರ್ಣವಿಭೇದ ಘರ್ಷಣೆಯಲ್ಲಿ ಇಬ್ಬರು ಶ್ವೇತ ವರ್ಣೀಯರಿಗೆ ತಿವಿಯಲ್ಪಟ್ಟರು — ಪಡಪಾನೆಯಿಂದ ವರ್ಣೀಯನ ಜೊತೆ ಹೋಗುತ್ತಿದ್ದ ಒಬ್ಬ ಶ್ವೇತ ಸ್ತ್ರೀಯನ್ನು ನೂರು ಮಂದಿ ಶ್ವೇತರ ಗುಂಪು ಗೇಲಿ ಮಾಡಿತು — ಒಬ್ಬ ಶ್ವೇತ ವರ್ಣೀಯನ ಕೈ ಇರಿಯಲ್ಪಟ್ಟಿತು

★

ವರ್ಣವಿಭೇದ ಪರಿಣಾಮ

ಲಾಸ್ ಏಂಜಲ್ಸ್ — ನೀಗ್ರೋಗಳ ದಂಗೆ ಹಂಡಿ ಒಪ್ಪ ವೋಲೀಸಿನನು ಗುಂಡಿನೇಟಿಗೆ ಕುತ್ತಾದನು, ಮತ್ತೊಬ್ಬ ತೀವ್ರ ಗಾಯಗೊಂಡನು — ಇಲ್ಲೀವರೆಗೆ ವರ್ಣವಿಭೇದ ದಂಗೆಗಳ ಪ್ರಾರಂಭವಾದಂದಿನಿಂದ 32 ಮಂದಿ ವೋಲೀಸರು ಮಡಿದಿಂವರು

★

ಚೀನೀಯರ ಬೆಂಬಲ

ನವದೆಹಲಿ— ಪಾಕಿಸ್ತಾನಿ ಧಾಳಿಕಾರರ ಬೆಂಬಲಕ್ಕೆ ಚೀನಾ ಸೈನ್ಯದ ಅಧಿಕಾರಿಗಳಿರುವರೆಂದು ವಂದಿಯಾಗಿದೆ

ಉಪವಾಸಕ್ಕೆ ಪ್ರತಿ-ಉಪವಾಸ

ಡಂಡೀಘರ್— ಪಂಜಾಬು ಸಭಾ ಕಾರ್ಯಕ್ಕಾಗಿ ಸಂತ ಫತೇಸಿಂಗರು ಅಮರಣಾಂತ ಉಪವಾಸ ಕೈಗೊಂಡರೆ ಅದಕ್ಕೆ ಪ್ರತಿಯಾಗಿ ತಾವು ಉಪವಾಸ ಕೈಗೊಳ್ಳುವುದಾಗಿ ಸ್ವಾಮಿ ರಾಮಾನಂದ ಭಾರತೀಯರು ತಿಳಿಸಿರುವರು

ಪ್ರಧಾನ ಕಾರ್ಯದರ್ಶಿಗಳ ಯತ್ನ

ವಿಶ್ವಸಂಸ್ಥೆ — ಕಾಶ್ಮೀರದಲ್ಲಿನ ಹೊಡೆದಾಟದ ವಿಷಯ ಚರ್ಚಿಸಲು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಶ್ರೀ ಥಾಂಟರು, ಭಾರತ ಮತ್ತು ಪಾಕಿಸ್ತಾನದ ಪ್ರತಿನಿಧಿಗಳನ್ನು ತಮ್ಮಲ್ಲಿಗೆ ಪ್ರತ್ಯೇಕವಾಗಿ ಕರೆದಿರುವರು.

ರಕ್ಷಣಾ ಮಂತ್ರಿಗಳ ಭೇಟಿ

ನವದೆಹಲಿ— ಪಾರ್ಲಿಮೆಂಟಿನ ಎರಡು ಸಭೆಗಳಲ್ಲಿ, ಜಮ್ಮು-ಕಾಶ್ಮೀರದ ಕದನ ವಿರಾಮ ರೇಖೆಯಲ್ಲಿ ಪಾಕಿಸ್ತಾನಿ ಧಾಳಿಯನ್ನು ಭಾರತ ರಕ್ಷಣಾ ಪಡೆಯು ಮಟ್ಟಹಾಕಿರುವುದೆಂದು ರಕ್ಷಣಾ ಮಂತ್ರಿ ಚವಣ್ ಗೃಹ ಮಂತ್ರಿಗಳಿಗೆ ತಿಳಿಸಿದರು

★

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನಮಹಾವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂದಕ್ಕ ಕೃಷ್ಣಜೋಯಿಸರಿಂದ

18 ಬುಧವಾರ ಪಷ್ಟಿ ಅಶ್ವಿನಿ

ಕಾರ್ಗಿಲ್ ಭಾಗದಲ್ಲಿನ 3 ಠಾಣೆಗಳು ಭಾರತದ ವಶ

ನವದೆಹಲಿ — ಭಾರತ ಸೈನ್ಯವು ಕಾರ್ಗಿಲ್ ಭಾಗದಲ್ಲಿನ ಮೂರು ಪಾಕಿಸ್ತಾನಿ ಠಾಣೆಗಳನ್ನು ಪುನರಾಕ್ರಮಿಸಿಕೊಂಡಿತು — ಇದರಿಂದ ಶ್ರೀನಗರ-ಲೇಹ್‌ಗೆ ಇರುವ ಕಕ್ಕರಿಬೇಕೆಂದಿದ್ದ ಪಾಕಿಸ್ತಾನದ ಪ್ರಯತ್ನ ವಿಫಲವಾಯಿತು — ಇತ್ತ ಕಡೆ ಪಾಕಿಸ್ತಾನಿ ಎಂಟಿರಿ ಜಟುವಟಿಕೆ ಹೆಚ್ಚಿತು, ಮತ್ತು ಯಾದ ಪಾಕಿಸ್ತಾನಿ ಸೈನ್ಯವೇ ಕಾರ್ಯಕ್ಕೆ ತೊಡಗಿತ್ತು

ವೀಕ್ಷಕರ ತಿಳುವಳಿಕೆಗೆ

ಶ್ರೀನಗರ— ಭಾರತದ ದಂಡನಾಯಕ ಚೌಧುರಿಯವರು, ವಿಶ್ವಸಂಸ್ಥೆ ವೀಕ್ಷಕರ ಮುಖ್ಯಸ್ಥ ನಿಮ್ಮೋರ್‌ಗೆ, ಜಮ್ಮು-ಕಾಶ್ಮೀರಕ್ಕೆ ಪಾಕಿಸ್ತಾನದ ಭಾರಿ ಧಾಳಿಯ ವಿವರವನ್ನು ತಿಳಿಸಲು ಇಲ್ಲಿಗೆ ಬಂದಿರುವರು.

★

ನಾಲ್ಕು ಮಂದಿಯ ಬಂಧನ

ಶ್ರೀನಗರ— ಬಾರಮುಲಾದಲ್ಲಿ ಮೊನ್ನೆ ಆದ ಬಾರಿ ಅಗ್ನಿಅನಾಹುತಕ್ಕೆ ಸಂಬಂಧಪಟ್ಟಂತೆ 4 ಮಂದಿ ಸಶಸ್ತ್ರ ಧಾಳಿಕಾರರನ್ನು ಬಂಧಿಸಲ್ಪಟ್ಟರು; ಅವರಲ್ಲಿದ್ದ ಇತರ ಅಗ್ನಿಉತ್ಪಾದಕ ಪದಾರ್ಥಗಳು ವಶಪಡಿಸಿಕೊಳ್ಳಲಾಯಿತು

★

ಪ್ಲಾಸ್ಟಿಕ್ ಚಾವಣಿ

★

ಕೊಲೋರ್ಡ್ (ಡಾಡ್) — ಪುಟ್‌ಬಾಲು ಪಂದ್ಯಗಳು ಫಿಲಿಪ್ಪಿ ದೇಶಗಳಲ್ಲಿಯೂ ಅತಿ ಹೆಚ್ಚಿನ ಸಂಖ್ಯೆಯ ಪ್ರೇಕ್ಷಕರನ್ನು ಆಕರ್ಷಿಸುತ್ತಿರುವುದು ಎಲ್ಲರಿಗೂ ತಿಳಿದದ್ದೇ; ಪಂದ್ಯ ನಡೆಯುವಾಗ ಮಳೆ ಬಂದುಬಿಟ್ಟರೆ? ರಕ್ಷಣೆ ಇಲ್ಲವಾದರೆ ಎಲ್ಲೂ ನೆನೆಯುವುದೇ ಕಾದದ್ದೇ ತಾನೇ? ಇದಕ್ಕಾಗಿ ಕೊಲೋನಿನ ಫುಟ್‌ಬಾಲು ಸ್ಟೇಡಿಯಂಗೆ ಪ್ಲಾಸ್ಟಿಕ್ ಚಾವಣಿಯನ್ನು ಹೊದಿಸಲಾಗುತ್ತಿದೆ: 600 ಅಡಿ ಪರಿಧಿಯ ಈ ವೃತ್ತಾಕಾರದ ಸ್ಟೇಡಿಯಂನಲ್ಲಿ 75000 ಪ್ರೇಕ್ಷಕರು ನಿರ್ಯೋಚನೆಯಿಂದ ಕುಳಿತುಕೊಳ್ಳಬಹುದಾಗಿದೆ (ಯು ಪಿ ಎಸ್)

ಸದಸ್ಯರ ಸಸ್ಪೆಂಡು

ನವದೆಹಲಿ— ಸಭಾ ಕಾರ್ಯಕ್ಕೆ ಅತಂಕ ಪಡಿಸಿದ ಕಾರಣಕ್ಕೆ ರಾಜ್ಯ ಸಭೆ ಎಸ್ಸೆಸ್ಪಿ ಸದಸ್ಯ ಮುನಿರಾಂ ಬಾಗ್ರಿಯವರನ್ನು ಸ್ವೀಕರಿಂ 1 ಪಾರ ಸಸ್ಪೆಂಡು ಮಾಡಿರುವರು.

ಟಿಬೆಟ್ಟಿನಲ್ಲಿ

ನವದೆಹಲಿ— ಟಿಬೆಟ್ಟು ವಶ, ಚೀನಾರಿ ಅಕ್ರಮಿಕ ಲಡಕ್ಕಿನಲ್ಲಿ ಚೀನಾ ರೇಡಾರ್‌ನ್ನು ಸ್ಥಾಗಿಸಿ ವಿಮಾನನಿರ್ಮಾಣ ನಿರ್ಮಿಸುತ್ತಿರುವುದೆಂದು ಲೋಕಸಭೆಯಲ್ಲಿ ತಿಳಿಸಲಾಯಿತು

★

ಸಾವಿರ ಜನರ ಕಂಡ

ನವದೆಹಲಿ — ಕದನ ವಿರಾಮ ರೇಖೆ ಆಚೆ ಪಾಕಿಸ್ತಾನಿ ಸೈನ್ಯ ಮಾಡಿದ ಧಾಳಿಯಲ್ಲಿ ಮಾಧ್ಯಮ ಟ್ಯಾಂಕ್‌ಗಳು ವಶ, ಗಂಭೀರ ಶಸ್ತ್ರಾಸ್ತ್ರಗಳು ಉಪಯೋಗಿಸಲಾಗಿತ್ತೆಂದು ರಕ್ಷಣಾ ಇಲಾಖೆಯು ವಕ್ತಾರರೊಬ್ಬರು ಹೇಳಿದರು — ಜಮ್ಮು ಕಡೆ ಜು 14 ರಂದು ನುಗ್ಗಲು ಬಂದ ಪಾಕಿಸ್ತಾನಿ ಧಾಳಿಕಾರರು 1000 ಜನರಿದ್ದರೆಂದೂ, ಕೆಲವು ಕಡೆ ಮುಷ್ಟಾಮುಷ್ಟಿ ಹೊಡೆದಾಟ ನಡೆಯಿತೆಂದೂ ವಂದಿಯಾಗಿದೆ

ವಿಭಜಿಸುವವರಿಗೂ ಐಕ್ಯತೆಯ ಮೇಲೆ ವಿಶ್ವಾಸ!

—0—

ಕೆಲ ದಿನಗಳ ಹಿಂದೆ ಬೆಂಗಳೂರಿನಲ್ಲಿ ಕಾಂಗ್ರೆಸು ಕಾರ್ಯಕಾರಿ ಸಮಿತಿಯು ಸೇರಿದ್ದಾಗ ಭಾರತದ ಪ್ರಧಾನಿ ಲಾಲ ಬಹದ್ದೂರು ಶಾಸ್ತ್ರೀಜಿಯವರೂ ಅದರಲ್ಲಿ ಭಾಗವಹಿಸಿದ್ದರು। ಅವರ ಭಾಷಣದಾದ್ದಕೂ ಜನತೆ ಹರ್ಷೋದ್ಗಾರಗಳನ್ನು ಪ್ರಕಟಿಸುತ್ತಿತ್ತು; ಅದರಿಂದ ಉತ್ತೇಜಿತರಾದ ಶಾಸ್ತ್ರೀಜಿಯವರು ದೇಶದ ಐಕ್ಯತೆ, ಗಡಿರಕ್ಷಣೆ ರಾಷ್ಟ್ರದ ಗೌರವ, ಸ್ವಾಭಿಮಾನದ ಕುರಿತು ಮಾತಾಡಿದ್ದರು; ಸಭೆ ಅವರಿಗೆ ಪ್ರೋತ್ಸಾಹವನ್ನಿತ್ತಿತು.

ಅಮಾವಾಸ್ಯೆಯ ಭೀಕರ ಅಂಧಕಾರದಲ್ಲಿ ದೇಶವನ್ನು ಕಾಂಗ್ರೆಸ್ಸು ವಿಭಜಿಸಿ, ರಕ್ತರಂಜಿತ ಕೈಗಳಿಂದ ಅಧಿಕಾರ ಸ್ವೀಕಾರ ಮಾಡಿರುವುದನ್ನು ಭಾರತೀಯರು ನಾ ಮರೆತಿರಲಾರರು; ಅದನ್ನು ಮರೆಯುವುದೂ ಬಹಳ ಕಷ್ಟ: ಕಾಂಗ್ರೆಸ್ಸೂ ಮುಸ್ಲಿಂ ಲೀಗೂ ಸೇರಿ ಈ ದುರ್ಘಟನೆ ನಡೆಸಿದವು.

ಆ ಹೊತ್ತಿದ್ದರೂ ಬೆಂಗಳೂರಿನಲ್ಲಿ ಪ್ರಧಾನಿಗಳು ಭಾಷಣ ಮಾಡುತ್ತಿದ್ದಾಗ ಸಭಿಕರು ಜವ್ವಾಳಿ ಬಿಟ್ಟಿದರು; ಅವರು ಕಚ್ ಕದನ ವಿಂಷಯ ದೇಖೆಯ ಕುರಿತು ವಿವರಿಸುತ್ತಿದ್ದರು: ಆಗ ಅವರು ದೇಶದ ಐಕ್ಯತೆ ಹಾಗೂ ಗೌರವ ಮತ್ತು ಸ್ವಾಭಿಮಾನದ ಕುರಿತು ಹೇಳಿದಾಗ ಸಭಿಕರು ಉದ್ದಕ್ಕೂ ಕೈಚಪ್ಪಾಳೆ ಬಿಟ್ಟಿದರಂತೆ

ಮುಸ್ಲಿಮರ ತೃಪ್ತಿ ಕರಣಕ್ಕಾಗಿ ಪಾಕಿಸ್ತಾನಕ್ಕೆ ಕಾಂಗ್ರೆಸ್ಸು ಜನ್ಮ ಕೊಟ್ಟಿತು; ವಿಷಯ ಅಲ್ಲಿಗೇನೇ ಮುಗಿದಿಂದುವುದಿಲ್ಲ: ಪಾಕಿಸ್ತಾನವನ್ನು ನಿರ್ಮಿಸಿದ್ದೊಂದು ಮಾತ್ರವಲ್ಲ, ಅದು ಅಕ್ರಮಿಸಿ ವಶಪಡಿಸಿಕೊಂಡ ಪ್ರದೇಶಗಳನ್ನು ನಾವು ಬಿಟ್ಟುಕೊಡುತ್ತಿದ್ದೇನೆ: ಶಾಂತಿ ಸಂಧಾನದ ಮೃಗ ಮರೀಚಿಕೆ ಹಿಂದು ಗಡೆ ಬಹಳ ಬಂಧನದಿಂದ ಧಾವಿಸುತ್ತಿದ್ದೇವೆ.

ದೇಶವನ್ನು ವಿಭಜಿಸಿದವರು ಐಕ್ಯತೆ ಒಗ್ಗಟ್ಟು ಕುರಿತು ಮಾತೆತ್ತಾಡುವುದುಂದರೇನು? ಅವರು ಕಾಶ್ಮೀರ, ಬೆಂಬೆರಿ, ವಾಯವ್ಯ ಸರಹದ್ದು, ಕಚ್, ಹೀಗೆ ಕ್ರಮಶಃ ಕೈಬಿಟ್ಟುಕೊಂಡೇ ಬರುತ್ತಾರೆ; ನಿಜವಾಗಿ ಅವರಿಗೆ ಐಕ್ಯತೆಯ ಗಟ್ಟು ಗೊತ್ತಿರುವುದಿಲ್ಲ: ಅದಂಲ್ಲಿ ಅವರಿಗೆ ನಿಜವಾಗಿಯೂ ನಂಬಿಕೆಯು ಇರುವ ತೆ ಕಾಣುವುದೂ ಇಲ್ಲ: ಅದೆಲ್ಲಾ ಅವರ ಪಾಲಿಗೆ ಊಟಾವರಿಗೆ ಉಪದೇಶಸಲಿಕ್ಕಾಗಿ ಇತೆ ಅಷ್ಟೆ; ಇಲ್ಲದಿದ್ದರೆ ಗೋವೆಯ ವಿಷಯದಲ್ಲಿ ಕಾಂಗ್ರೆಸಿಗರು ಹಾಗೆ ಹೊಡೆದಾಡಿಕೊಳ್ಳುತ್ತಿದ್ದರೇ? ಹೊಡೆದಾಡಿಕೊಳ್ಳುವರೇ?

— ಶಿವಶಂಕರ್

Protect the Cow

ಗೋಸಂರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ



Help The Gorakshana

ಗೋಂರಕ್ಷಣೆಗೆ ಬೆಂಬಲ ಕೊಡಿ

ವುಡ್‌ಲ್ಯಾಂಡ್ಸ್ ಕೇರ್ಡಿಯುತ 3 ನೇ ವಾರ

ಜಾಯ್ ಮುಖರ್ಜಿ — ರಾಜಶ್ರೀಯವರ ಕಲಾತ್ಮಕ ಅಭಿನಯದಿಂದ ಕೂಡಿದ

.... ಚಿತ್ತಾಕರ್ಷಕ ಹಿಂದಿ ಚಿತ್ರಂತ್ತ ....

ಜೀ ಚಾಹ್‌ತಾ ಹೈ

★ Ji Chahta Hai ★

ಸಂಗೀತ : ಕಲ್ಯಾಣಜೀ ಆನಂದಜೀ — [ಪ್ರತಿ ದಿನ 3 ಪ್ರದರ್ಶನಗಳು

ಅಪೆರ— 13-7-65 ರಿಂದ

ನರಸನಾ, ಬಿ. ಎ.

ಪಾತ್ರ— ಭಾನುಮತಿ, ಬಾಲಾಜಿ, ಎಂ ಆರ್ ರಾಧಾ, ತಾಯಿ ನಾಗೇಶ್

ಅನೋಪ ತಮಿಳು ಸಾಂಸಾರಿಕ ಚಿತ್ರ] [ಪ್ರತಿ ದಿನ 3 ಆಟಗಳು

SHAKTI

SUDHA

A Superb Tonic

Quality Printing — Neat Binding

Lakshminarasimha Press

Sivarampet, Mysore

ಅಶೋಕ ಪುಜೆನೀನ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ಸದಾ ಲಭ್ಯ ದೊರೆಯುವ ತಾಣ

ರೋಗಿಗಳಿಗೆ ಸೂಕ್ತ ಔಷಧಿ ಕೊಡಲಾಗುತ್ತದೆ

Edited, Printed & Published by Dharma'prachara niratha M S Krishna Rao (Proprietor) at the Satyavadi Press Chamarajapuram, Mysore 4